ಓ.ಎಸ್ ನಂ. 878/2022
ಪಿಡಬ್ಲ್ಯೂ 01

ದಿನಾಂಕಃ 06.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಃ ವಾದಿಯ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹಾಜರು ಪಡಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಹಲವು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಆರ್ ಟಿ ಸಿ ಯನ್ನು ನಿಪಿ1, 4 ಆರ್ ಟಿ ಸಿ ಗಳ ದೃಢಿಕೃತ ನಕಲುಗಳನ್ನು ನಿಪಿ2 ರಿಂದ 5 ಎಂದು, 1 ನೋಟಿಸ್‌ನ್ನು ನಿಪಿ6 ಎಂದು, ಮುಟೇಷನ್ ರಿಜೀಸ್ಟರ್ ಪ್ರತಿಯನ್ನು ನಿಪಿ7 ಎಂದು, 1 ಕರ ಆಕರಣೆಯ ಯಾದಿಯನ್ನು ನಿಪಿ8 ಎಂದು, 3 ಆಸ್ತಿ ಉತಾರಗಳನ್ನು ನಿಪಿ9 ರಿಂದ 11 ಎಂದು ಗುರುತಿಸಲಾಯಿತು.

ಪಾಟೀಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ವಕೀಲರಿಂದಃ

ನಾನು ನಿಪ್ಪಾಣಿಯಲ್ಲಿ ವಾಸವಿರುತ್ತೇನೆ. ನಾನು ಮದುವೆಯಾದ ದಿನದಿಂದ ಅಲ್ಲಿಯೇ ವಾಸವಿದ್ದೇನೆ ಎಂದರೆ ಸರಿ. ಎಷ್ಟು ಆಸ್ತಿಗಳ ಮೇಲೆ ಈ ದಾವೆ ಸಲಲಿಸಿದ್ದೀರಿ ಎಂದರೆ ಸಾಕ್ಷಿ ಘಟಪ್ರಭಾದಲ್ಲಿ ಮನೆ ಮತ್ತು ಜಾಗವಿದೆ, ಮತ್ತು ಬೆಲ್ಲದ ಬಾಗೇವಾಡಿಯಲ್ಲಿ ಮನೆ ಮತ್ತು ಹೊಲ ಇದೆ ಎನ್ನುತ್ತಾರೆ. ಪಿತ್ರಾರ್ಜಿತ ಆಸ್ತಿಗಳು ಎಂದರೆ ಬೆಲ್ಲದಬಾಗೇವಾಡಿಯಲ್ಲಿ ಇರುವ ಮನೆ ಮತ್ತು ಹೊಲ ಮಾತ್ರ ಎಂದರೆ ಸರಿ. ನನ್ನ ತಂದೆಯವರು ಅಂಚೆ ಕಛೆರಿಯಲ್ಲಿ ಕೆಲಸ ಮಾಡುತ್ತಿದ್ದರು, ಅವರು 2004 ರಲ್ಲಿ ನಿವೃತ್ತಿ ಆದರು. ಅವರು ನಿವೃತ್ತಿಯಾದ ನಂತರ ಘಟಪ್ರಭಾದಲ್ಲಿ ಇರುವ ಮನೆ ಮತ್ತು ಜಾಗವನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ಮನೆ ಮತ್ತು ಜಾಗ ಅವರ ಸ್ವಯಾರ್ಜಿತ ಎಂದರೆ ಸರಿ. ನನ್ನ ದಾವೆಯಲ್ಲಿ ದಾವಾ ಸ್ವತ್ತುಗಳು ಎಲ್ಲಾ ಪಿತ್ರಾರ್ಜಿತ ಆಸ್ತಿಗಳು ಎಂದು ಸುಳ್ಳಾಗಿ ಬರೆಸಿದ್ದೇನೆ ಎಂದರೆ ಸರಿಯಲ್ಲ. ಘಟಪ್ರಭಾದಲ್ಲಿರುವ ಮನೆ ಮತ್ತು ಜಾಗದಲ್ಲಿ ನನಗಾಗಲಿ, ನನ್ನ ಅಣ್ಣತಮ್ಮಂದಿರಿಗಾಗಲಿ ಪಾಲು ಇಲ್ಲ ಎಂದರೆ ಸರಿ,

ಪಿತ್ರಾರ್ಜಿತ ಆಸ್ತಿಗಳಲ್ಲಿ ಪಾಲು ಇರುತ್ತದೆ. ನಾನು ಸುಳ್ಳು ದಾವೆ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ